4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- (ಅ) ಬಂಗಾರ ಪೇಟೆಯಲ್ಲಿ ಲಾಕ್‌ಅಪ್ ಡೆತ್.

+ **ಶ್ರೀ ಬಿ. ಎಸ್. ಯಡಿಯೂರಪ್ಪ** (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಗಳೇ, ಗೃಹ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಈಗ ತಾವೇ ಗೃಹ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದೀರಿ. ಇತ್ತೀಚೆಗೆ ಸದನದ ಕಾರ್ಯ ಕಲಾಪ ಪ್ರಾರಂಭ ಆದಮೇಲೆ ಎರಡು ಲಾಕಪ್ ಸಾವುಗಳು ಆಗಿವೆ. ನಂಜನಗೂಡಿನಲ್ಲಿ ಮಹದೇವನಾಯಕ ಎಂಬುವವನ ಲಾಕಪ್ ಸಾವು ಆಯಿತು. ನೀವು ಇದನ್ನು ಸಿ.ಓ.ಡಿ ತನಿಖೆಗಾಗಿ ಹಾಕಿದ್ದೀರಿ ಮತ್ತು ಸತ್ತವನ ಕುಟುಂಬಕ್ಕೆ 25 ಸಾವಿರ ರೂಪಾಯಿಗಳನ್ನೇನೋ ಪರಿಹಾರ ಕೊಟ್ಟಿದ್ದೀರಿ. ಈಗ ನಿನ್ನೆಯ ದಿವಸ ಬಂಗಾಪೇಟೆಯಲ್ಲಿ ಲಾಕಪ್ ಸಾವು ಆಗಿದೆ. ಏಕೆ ಆಯಿತು? ಅಲ್ಲಿ ಗೋಪಾಲಪ್ಪ ಎನ್ನುವಂಥವನು ಸುಮಾರು ಒಂದು ಅಥವಾ ಒಂದೂವರೆ ಸಾವಿರ ಟೊಮೋಟೋ ಗಿಡಗಳನ್ನು ಕದ್ದ ಎಂದು ನಿನ್ನೆಯ ದಿವಸ ಯಾರೋ ಒಬ್ಬ ಕಂಪ್ಲೆಂಟ್ ಕೊಡುತ್ತಾನೆ. ಪೋಲಿಸಿನವರು ಆತನನ್ನು ಮಧ್ಯಾಹ್ನ ಕರೆದುಕೊಂಡು ಹೋಗುತ್ತಾರೆ ಮತ್ತು ಸಾಯಂಕಾಲ ಈತ ಪೋಲಿಸ್ ಸ್ಟೇಶನ್‌ನಲ್ಲಿ ಪೋಲಿಸಿನವರ ಹೊಡೆತದಿಂದ ಸಾಯುತ್ತಾನೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಗೋಪಾಲಪ್ಪ ಎನ್ನುವವನಿಗೆ ಸುಮಾರು ಆರೇಳು ಎಕರೆ ಜಮೀನು ಇದೆ. ಈತನ ಮೇಲೆ ಕಂಪ್ಲೆಂಟ್ ಕೊಟ್ಟಿರುವವನು ಈತನ ಜಮೀನಿನ ಪಕ್ಕದಲ್ಲಿರುವ ನಾರಾಯಣಪ್ಪ ಎನ್ನುವವನು. ಏನೋ ವೈಯಕ್ತಿಕ ದ್ವೇಷವಿತ್ತೋ ಅಥವಾ ಬೇರೆ ಏನು ಕಾರಣವೋ ಅವುಗಳ ಸತ್ಯಾಸತ್ಯತೆ ಬಗ್ಗೆ ನಾನು ಈಗ ವಿವರಕ್ಕೆ ಹೋಗುವುದಿಲ್ಲ. ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಇದನ್ನು ತಿಳಿಸುತ್ತೇನೆ. ಇವೊತ್ತು ಪೋಲಿಸ್ ದೌರ್ಜನ್ಯ, ಲಾಕಪ್ ಸಾವುಗಳು, ಒಬ್ಬ ಮುಖ್ಯಮಂತ್ರಿಗಳೇ ಆ ಗೃಹ ಇಲಾಖೆಯನ್ನು ನೋಡಿಕೊಳ್ಳುತ್ತಿರುವ ಕಾಲದಲ್ಲೂ ನಿರಂತರವಾಗಿ ನಡೆಯುತ್ತಿದೆ. ಯಾವುದೇ ಭಯವಿಲ್ಲ. ಸ್ವಾಮಿ, ಇವೊತ್ತು ಕೋಲಾರ ಜಿಲ್ಲೆ ಒಂದು ರೀತಿಯಲ್ಲಿ ಪೋಲಿಸ್ ರಾಜ್ಯವಾಗಿದೆ. ನೂರಾರು ಉದಾಹರಣೆಗಳು ಇವೆ. ನಾನು ಈಗ ಅವೆಲ್ಲವನ್ನೂ ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ಆ ಇಲಾಖೆ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ವೈ. ರಾಮಕೃಷ್ಣರವರು ಆ ವಿವರಗಳನ್ನು ನಿಮ್ಮ ಗಮನಕ್ಕೆ ತರುವವರಂಥವರಿದ್ದಾರೆ. ಪೋಲಿಸ್ ಅಟ್ರಾಸಿಟಿಸ್ ಬಗ್ಗೆಯೇ ಒಂದು ರೀತಿಯಲ್ಲಿ ವಿವರವಾದಂಥ ಚರ್ಚೆಯನ್ನು ತೆಗೆದುಕೊಳ್ಳೋಣ. ಇದಕ್ಕಾಗಿ ಮುಂದೆ ಅಧ್ಯಕ್ಷರ ಅಪ್ಪಣೆಯನ್ನು ಪಡೆದುಕೊಂಡು ಮುಂದೆ ಬರುತ್ತೇನೆ. ಆದರೆ ಇವೊತ್ತು ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆಂದರೆ, ಈ ಕ್ರಿಮಿನಲ್ ಕೋರ್ಟ್‌ಗಳೇ ಬೇಕಾಗಿಲ್ಲ, ಪೋಲಿಸ್ ಸ್ಟೇಷನ್‌ನಲ್ಲೇ ಯಾರನ್ನು ಬೇಕಾದರೂ ಮತ್ತು ಯಾರು ಬೇಕಾದರೂ ಗಲ್ಲಿಗೇರಿಸಬಹುದು, ಹೊಡೆದು ಸಾಯಿಸಬಹುದು ಎಂದೇನಾದರೂ ಮಾಡಿದ್ದೀರಾ ಅಥವಾ ಎಲ್ಲಾ ಕಾನೂನುಗಳನ್ನು ಆತನಿಗೆ ಕೊಟ್ಟು ಪೋಲಿಸ್ ಇಲಾಖೆಯ ಅಧಿಕಾರಿಗಳು ಮನಬಂದಂತೆ ವರ್ತನೆ ಮಾಡುವುದಕ್ಕೆ ತಾವೇನಾದರೂ ಅನುಮತಿಯನ್ನು ಕೊಟ್ಟಿದ್ದೀರಾ? ಇವೊತ್ತು ಸತ್ತವನ ಕುಟುಂಬಕ್ಕೆ 1 ಲಕ್ಷ ಅಥವಾ ಒಂದೂವರೆ ಲಕ್ಷ ಪರಿಹಾರವನ್ನು ಕೊಡಬಹುದು, ಆದರೆ ಆ ಮಕ್ಕಳು ಮರಿಯ ಮತ್ತು ಸಂಸಾರದ ಗತಿಯೇನು? ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇವೊತ್ತು ಲಾಕಪ್ ಸಾವುಗಳು ಆಗುತ್ತಿವೆ, ನನಗೆ ಗೊತ್ತಿರುವ ಪ್ರಕಾರ

ನೀವು ವಿವರಗಳನ್ನೇನ್ನೋ ಕೊಡುತ್ತೀರಿ, ಆಲ್ಲಿರುವಂಥ ಪೋಲೀಸ್ ಅಧಿಕಾರಿಯೇ ಈ ಕೊಲೆ ಮಾಡಿದ್ದಾನೆ ಎನ್ನುವ ಆರೋಪದ ಮೇಲೆ ಬಂಧನವನ್ನೇನೋ ಮಾಡುತ್ತೀರಿ. ಆದರೆ ಈ ರೀತಿಯಲ್ಲಿ ಎಷ್ಟು ಜನಗಳಿಗೆ ಶಿಕ್ಷೆಯಾಗಿದೆ? ನಾನು ಬಹಳ ಹಿಂದೆ ಹೋಗುವುದಿಲ್ಲ, ಈ 5 ವರ್ಷಗಳಿಂದೀಚೆಗೆ ಎಷ್ಟು ಲಾಕಪ್ ಸಾವುಗಳಾಗಿವೆ? ಎಷ್ಟು ಜನ ಪೋಲೀಸ್ ಅಧಿಕಾರಿಗಳು ಈ ಕೊಲೆ ಆರೋಪಕ್ಕೆ ತುತ್ತಾಗಿದ್ದಾರೆ? ಎಷ್ಟು ಜನಕ್ಕೆ ಶಿಕ್ಷೆಯಾಗಿದೆ? ಏಕೆಂದರೆ ಅದೇ ಪೋಲೀಸ್ ಅಧಿಕಾರಿಗಳು ನಾಳೆ ಎಫ್.ಐ.ಆರ್. ಹಾಕುವಂಥವರು, ಛಾರ್ಜ್‌ಶೀಟ್ ಹಾಕುವಂಥವರು ಒಬ್ಬ ಅಧಿಕಾರಿ ಪ್ರಾಮಾಣಿಕವಾಗಿ ಈ ರೀತಿ ಲಾಕಪ್ ಸಾವು ಆಗಬಾರದು ಎನ್ನುವ ದೃಷ್ಟಿಯಿಂದ ಒಬ್ಬನಿಗೆ ಪನಿಷ್ ಆಗಬೇಕು, ಈ ರೀತಿಯ ಘಟನೆಗಳು ನಡೆಯಬಾರದು, ಈ ಇಲಾಖೆಗೆ ಕೆಟ್ಟ ಹೆಸರು ಬರಬಾರದು ಎಂದು ಯೋಚನೆ ಮಾಡಿ ಪ್ರಾಮಾಣಿಕವಾಗಿ ಅಧಿಕಾರಿಗಳು ಕೆಲಸ ಮಾಡುವವರು ವಿರಳವಾಗಿರುವಂಥ ಒಂದು ಪರಿಸ್ಥಿತಿ. ನಾನು ದಯಮಾಡಿ ನಿಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಮನ ಬಂದಂತೆ ಪೋಲೀಸ್ ಅಧಿಕಾರಿಗಳು ವರ್ತನೆ ಮಾಡುತ್ತಿದ್ದಾರೆ. ಯಾರ ಹದ್ದುಬಸ್ತಿನಲ್ಲಿಯೂ ಇವ್ರೊತ್ತು ಆ ಇಲಾಖೆ ಇಲ್ಲ. ನನಗೊ ಗೊತ್ತಿಲ್ಲ, ನೀವು ಮುಖ್ಯಮಂತ್ರಿಗಳಾಗಿ ಗೃಹ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದು ನಿಮಗೆ ಬಿಡುವು ಆಗುತ್ತಿದೆಯೋ ಇಲ್ಲವೋ; ಆಲ್ಲಿಗೆ ಭೇಟಿ ಕೊಡುವುದಕ್ಕೆ ಆಗುತ್ತಿದೆಯೋ ಇಲ್ಲವೋ, ಗಮನ ಕೊಡುವುದಕ್ಕೆ ಆಗುತ್ತಿದೆಯೋ ಇಲ್ಲವೋ, ಯಾರಿಗಾದರೂ ಪುರುಸೊತ್ತು ಇದ್ದವರಿಗೆ ಅಂಥವರಿಗೆ ಈ ಪೋಲೀಸ್ ಇಲಾಖೆಯನ್ನು ವಹಿಸಿಕೊಡಿ. ಕಳೆದ ಎರಡು ತಿಂಗಳಲ್ಲಿ ನಡೆದಿರುವ ಸುಮಾರು 50 ಉದಾಹರಣೆಗಳನ್ನು ನಿಮಗೆ ಬೇಕಾದರೆ ನಾನು ಕೊಡುತ್ತೇನೆ. ಕೊಲೆ, ಸುಲಿಗೆ ನಿರಂತರವಾಗಿ ನಡೆಯುತ್ತಿದೆ. ಹೊರಗಡೆ ಆಗುತ್ತಿದೆ ಅವನ್ನು ತಪ್ಪಿಸುವ ಯೋಗ್ಯತೆ ಇಲ್ಲ, ಪೋಲೀಸ್ ಸ್ಟೇಷನ್‌ಗೆ ಬಂದು ಯಾರೋ ಒಬ್ಬ ಒಂದೂವರೆ ಸಾವಿರ ಟಿಮೋಟೋ ಗಿಡಗಳನ್ನು ಕದಿದ್ದಾನೆ ಎಂದು ಒಬ್ಬ ಕಂಪ್ಲೆಂಟ್ ಕೊಟ್ಟರೆ ಅಷ್ಟಕ್ಕೆ ಆಲ್ಲಿ ಹೊಡೆದು ಸಾಯಿಸಿಬಿಡುತ್ತಾರೆ ಎನ್ನುವುದಾದರೆ ಬಹುಶಃ ಯಾರನ್ನು ಯಾರು ರಕ್ಷಣೆ ಮಾಡಬೇಕು ಇದು ಅರ್ಥವಾಗದೇ ಇರುವಂಥ ಒಂದು ಪರಿಸ್ಥಿತಿ ಇವ್ರೊತ್ತು ಬಂದಿದೆ. ಆದೇ ರೀತಿಯಲ್ಲಿ ನಂಜನಗೂಡಿನಲ್ಲಿ ಆದಂಥ ಲಾಕಪ್ ಸಾವಿನ ಬಗ್ಗೆ ಸಿ.ಓ.ಡಿ.ಗೆ ವಹಿಸಿದಿರಿ. ಒಳ್ಳೆಯದು. ಆದರೆ ಅವನ ಕುಟುಂಬಕ್ಕೆ ಏನು ಪರಿಹಾರ ಕೊಟ್ಟಿರೀ? ಕೇವಲ 25 ಸಾವಿರ ರೂ.ಗಳನ್ನು ಕೊಟ್ಟಿರಿ. ನಾನು ಏನು ಹೇಳುವುದು. ಏನೆಂದರೆ ಬೇರೆ ಯಾರೋ ಒಬ್ಬನ್ನ ಬೇರೆ ಯಾರೋ ಕೊಂದಾಗ 1 ಲಕ್ಷ ಪರಿಹಾರವನ್ನು ಕೊಡುತ್ತೀರಿ, ಆದರೆ ಪೋಲಿಸಿನವರೇ ಕೊಂದರೆ ಕೇವಲ 25 ಸಾವಿರ ಪರಿಹಾರ ಕೊಡುತ್ತೀರಿ, ನಾನು ಇಂದು ಹೇಳುತ್ತಿದ್ದೇನೆ, ಈ ರೀತಿಯ ಲಾಕಪ್ ಸಾವು ಆದಾಗ 2 ಲಕ್ಷ ಪರಿಹಾರವನ್ನು ಕೊಡಬೇಕು, ಯಾವ ಪೋಲೀಸ್ ಅಧಿಕಾರಿ ಲಾಕಪ್ ಸಾವಿಗೆ ಕಾರಣನಾದನೋ ಅವನಿಗೆ ಬದುಕಿರುವವರೆಗೆ ಏನೇನು ಸವಲತ್ತುಗಳು ಬರುತ್ತಿತ್ತೋ ಅವನಿಂದ ರಿಕವರಿ ಮಾಡಿ. ಅವನನ್ನು ಜೈಲಿಗೆ ಕಳುಹಿಸುವುದು ತದನಂತರದ ವಿಷಯ. ಅವನಿಗೆ ಶಿಕ್ಷೆ ಕೊಡುವುದು ಆಮೇಲೆ. ಈ ರೀತಿಯಲ್ಲಿ ನಿರಂತರವಾಗಿ ಲಾಕಪ್ ಸಾವುಗಳು ನಡೆಯುತ್ತಿವೆ. ನನಗೆ ಈಗ ಮಂತ್ರಿಗಳು ಇದಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಕೊಟ್ಟಮೇಲೆ ನಾನು ಉಳಿದಂಥ ವಿವರಗಳನ್ನು ತಮಗೆ ಒದಗಿಸುತ್ತೇನೆ. ಆಮೇಲೆ ಆದಕ್ಕೆ ನಾನು ಕ್ಲಾರಿಫಿಕಷನ್‌ನ್ನು ಆಮೇಲೆ ಕೇಳುತ್ತೇನೆ. ದಯಮಾಡಿ ಈ ಕೇಸ್‌ನ ಬಗ್ಗೆ ಕಾರಣವೇನು? ಯಾರ ಮೇಲೆ ಏನು

ಕ್ರಮವನ್ನು ತೆಗೆದುಕೊಂಡಿದ್ದೀರಿ? ನಂಜನಗೂಡಿನ ಪೋಲಿಸ್ ಸ್ಟೇಷನ್‌ನಲ್ಲಿ ಆದ ಲಾಕಪ್ ಸಾವಿನಲ್ಲಿ ಎಷ್ಟು ಜನರನ್ನು ಬಂಧನ ಮಾಡಿದ್ದೀರಿ, ಇದರಲ್ಲಿ ಎಫ್.ಐ.ಆರ್.ನ ಯಾರ ಮೇಲೆ ಹಾಕಿದ್ದೀರಿ? ಯಾರ ಮೇಲೆ ಅಕ್ಷನ್ ತೆಗೆದುಕೊಂಡಿದ್ದೀರಿ? ಇವುಗಳ ಬಗ್ಗೆ ಸಚಿವರು ಉತ್ತರ ಕೊಟ್ಟ ಮೇಲೆ ನಾನು ಮತ್ತೆ ಕ್ಲಾರಿಫಿಕೇಷನ್ ಕೇಳುತ್ತೇನೆ.

MR. SPEAKAR :- You had sought permisson during the zero hour. ಶೂನ್ಯ ವೇಳೆಯಲ್ಲಿ ಚರ್ಚೆ ಮುಂದುವರಿಯಬೇಕು ಎನ್ನುವ ಆಪೇಕ್ಷೆ ಇದ್ದರೆ ಕೇವಲ ಎರಡೇ ಎರಡು ನಿಮಿಷದಲ್ಲಿ ಸಂಕ್ಷಿಪ್ತವಾಗಿ ಮಾತ್ರ ವಿಷಯವನ್ನು ಹೇಳಬೇಕು. ಇದರ ಮೇಲೆ ಆ ಚರ್ಚೆ ಇರುವುದಿಲ್ಲ.

+ **ಶ್ರೀ ಜಿ. ಎ. ರಾಮರೆಡ್ಡಿ (ಬಾಗೇಪಲ್ಲಿ)** :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಂಗಾರಪೇಟೆಯಲ್ಲಿ ನಡೆದಿರುವ ಲಾಕಪ್ ಸಾವಿನ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಭೇಟಿ ಕೊಟ್ಟಿದ್ದಾರೆಂದು ಸಚಿವರು ಉತ್ತರದಲ್ಲಿ ಬಹುಶಃ ಹೇಳಬಹುದು. ಇದು ಪ್ರಶ್ನೆಯಲ್ಲ. ಕೋಲಾರ ಜಿಲ್ಲೆಯಲ್ಲಿ ಪೋಲಿಸಿನವರದ್ದು ಒಂದು ಕಡೆ ನಿಷ್ಕ್ರಿಯತೆ ಮತ್ತು ಇನ್ನೊಂದು ಕಡೆ ದಬ್ಬಾಳಿಕೆ ಎರಡೂ ನಡೆಯುತ್ತದೆ. ಆದರ ಪರಿಣಾಮವೇ ಇಂದು ಬಂಗಾರಪೇಟೆಯಲ್ಲಿ ಲಾಕಪ್ ಡೆತ್ ಆಗಿರುವಂಥದ್ದು. ಕಂಪ್ಲೆಂಟ್ ಯಾರ ಮೇಲಾದರೂ ಕೊಟ್ಟರೆ ಅವರನ್ನು ಪೋಲಿಸ್ ಸ್ಟೇಷನ್‌ನಲ್ಲಿ ಒಳಗಡೆ ಹಾಕಿಕೊಂಡು ಸಾಯಿಸಬಹುದು ಎನ್ನುವುದೇ ಪೋಲೀಸ್ ಕಾಯಿದೆಯಾದರೆ ಇನ್ನು ಮುಂದೆ ಯಾರೂ ಪೋಲಿಸ್ ಸ್ಟೇಷನ್‌ಗೆ ಹೋಗುವ ಅವಶ್ಯಕತೆ ಇಲ್ಲ. ಆದ್ದರಿಂದ ಈ ಲಾಕಪ್ ಡೆತ್‌ಗೆ ಯಾರು ಕಾರಣರಿದ್ದಾರೆ ಅವರ ಮೇಲೆ ಸರ್ಕಾರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಅಧಿಕಾರಿಗಳು ಇದರ ಬಗ್ಗೆ ಭೇಟಿ ಕೊಟ್ಟಿದ್ದಾರೆ, ವರದಿಯನ್ನು ತರಿಸಿಕೊಳ್ಳುತ್ತೇವೆ, ಆಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಉತ್ತರ ಹೇಳಿದರೆ ನಾನು ಅದನ್ನು ಒಪ್ಪುವುದಿಲ್ಲ. ಆದ್ದರಿಂದ ತಕ್ಷಣ ಬಂಗಾರಪೇಟೆಯಲ್ಲಿ ಲಾಕಪ್ ಸಾವಿಗೆ ಯಾರು ಕಾರಣರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಂದು ಹೈಕೋರ್ಟ್ ಆದೇಶ ನೀಡಿ ರಕ್ಷಣೆ ಕೊಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದರೂ ಕೂಡ ಅವರಿಗೆ ರಕ್ಷಣೆ ಕೊಡುವುದಕ್ಕೆ ಪೋಲಿಸಿನವರು ತಯಾರಿಲ್ಲ. ಆದರೆ ಯಾರೋ ಒಬ್ಬ ಮುಗ್ಧನ ಮೇಲೆ ಕಂಪ್ಲೆಂಟ್ ಕೊಟ್ಟ ತಕ್ಷಣ ಆತನನ್ನು ಪೋಲಿಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಸಾಯಿಸತಕ್ಕಂಥ ವ್ಯವಸ್ಥೆ ಆಗಿದೆ. ಈಗ ಬಂಗಾರ ಪೇಟೆಯಲ್ಲಿ ಬಿಗಿಯಾದ ವಾತಾವರಣ ನಿರ್ಮಾಣವಾಗಿದೆ. ಅವರು ಬಂದು ಹೋರಾಟ ಮಾಡಲಿಕ್ಕೆ ತಯಾರಾಗಿದ್ದಾರೆ. ಅದೆಲ್ಲ ನಡೆಯುವುದಕ್ಕೆ ಮೊದಲೇ ಸರ್ಕಾರ ಇದರ ಬಗ್ಗೆ ತೀವ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಅಮಾನತ್ತಿನಲ್ಲಿಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೇ, ಈ ಬಂಗಾರಪೇಟೆ ಮತ್ತು ನಂಜನಗೂಡಿನಲ್ಲಿ ಆಗಿರತಕ್ಕಂಥ ಲಾಕಪ್ ಡೆತ್ ಬಗ್ಗೆ ಪರಿಹಾರ ಕೊಟ್ಟುಬಿಟ್ಟು ಹೇಳಿಕೆ ಕೊಡುವುದಕ್ಕಿಂತ ಹೆಚ್ಚಾಗಿ ಪ್ರಾಮಾಣಿಕನಾಗಿ ಸರ್ಕಾರ ಇಂಥ ಲಾಕಪ್ ಸಾವು ಆದಾಗ ನೀವು ಏನು ಮಾಡಬೇಕು ಎನ್ನುವಂಥಾದ್ದು ಬಹಳ ಮುಖ್ಯ.

ಸರ್ಕಾರ ಬರೇ ಒಂದು ಹೇಳಿಕೆ ಕೊಡುವುದರಿಂದ ಏನೂ ಆಗುವುದಿಲ್ಲ. ಹೇಳಿಕೆ ಕೊಟ್ಟುಬಿಟ್ಟರೆ ಅಲ್ಲಿಗೆ ಮುಗಿಯಿತು ಎನ್ನುವ ಅರ್ಥ ಬರಬಾರದು. ಇಂಥ ಲಾಕಪ್ ಡೆತ್ ಆದಾಗ ಸರ್ಕಾರ ಪರಿಣಾಮಕಾರಿಯಾಗಿ ಏನು ಮಾಡಬೇಕು ಎನ್ನುವುದರ ಬಗ್ಗೆ ಚಿಂತನೆ ಆಗಬೇಕು. ಈಗೇನಾಗಿದೆ ಬಂಗಾರಪೇಟೆಯಲ್ಲಿ ಆಯಿತು, ನಂಜನಗೂಡಿನಲ್ಲಿ ಲಾಕಪ್ ಡೆತ್ ಆಯಿತು, ಆದಕ್ಕೆ ನೀವೇನೋ 25 ಸಾವಿರ ರೂ.ಗಳನ್ನು ಪರಿಹಾರ ಎಂದು ಕೊಟ್ಟಿರಿ ; ತಕ್ಷಣಕ್ಕೆ ಇದು ಮುಗಿಯಿತು. ಆದರೆ ಇದಕ್ಕೆ ಕಾರಣವೇನು? ಇದಕ್ಕೆ ಸಿ.ಓ.ಡಿ. ತನಿಖೆಯಾದರೆ ಅಲ್ಲಿಗೆ ಮುಗಿಯುವುದಿಲ್ಲ. ಇದಕ್ಕೆ ಸಮಗ್ರವಾಗಿ ಲಾಕಪ್ ಡೆತ್‌ಗಳನ್ನು ನಿಲ್ಲಿಸುವುದಕ್ಕೆ ಪರಿಣಾಮಕಾರಿಯಾದ ಕ್ರಮಗಳ ಬಗ್ಗೆ ಸರ್ಕಾರ ತಿಳಿಸಬೇಕು.

+ **ಶ್ರೀ ರೋಷನ್ ಬೇಗ್** (ಗೃಹ ಇಲಾಖಾ ರಾಜ್ಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಈ ಬಂಗಾರಪೇಟೆಯಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ನಡೆದ ಲಾಕಪ್ ಡೆತ್ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಮತ್ತು ಮಾನ್ಯ ಸದಸ್ಯರುಗಳಾದ ಶ್ರೀರಾಮರೆಡ್ಡಿಯವರು ಮತ್ತು ವಾಟಾಳ್ ನಾಗರಾಜ್‌ರವರು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನನಗೆ ಇದರ ಬಗ್ಗೆ ಸ್ಟೇಟ್‌ಮೆಂಟ್‌ನ್ನು ಸದನದಲ್ಲಿ ಮಾಡುವುದಕ್ಕೆ ನಾಚಿಕೆಯಾಗುತ್ತಿದೆ. ಏಕೆಂದರೆ ಈ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಯಾರೋ ಒಬ್ಬ ಟಿಮೋಟೋ ಗಿಡಗಳನ್ನು ಕದ್ದ ಎಂದು ಹೇಳಿ 22-07-96 ರಂದು ರಾತ್ರಿ ಎರಡು ಘಂಟೆಗೆ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬಂದು ಇಡೀ ದಿವಸ ಪೋಲೀಸ್ ಸ್ಟೇಷನ್‌ನಲ್ಲಿ ಅವರನ್ನು ಇಟ್ಟು ಅವರಿಗೆ ಸಿವಿಯರ್ ಆಗಿ ಇಂಟರಾಗೇಷನ್ ಮಾಡಿ ಆಮೇಲೆ ವೈದ್ಯರನ್ನು ಕರೆದುಕೊಂಡು ಬಂದು ಈತನಿಗೇನೋ ಆಗಿದೆ ಸ್ವಲ್ಪ ನೋಡಿ ಎಂದು ಹೇಳುತ್ತಾರೆ. ವೈದ್ಯರು ಪರೀಕ್ಷಿಸಿ ಈತ ಸತ್ತಿದ್ದಾನೆ ಎಂದು ಹೇಳುತ್ತಾರೆ. ಆಮೇಲೆ ಇವರು ಓಡಿ ಹೋಗುತ್ತಾರೆ.

12-40 ಪಿ. ಎಂ.

A case of murder and wrongful confinement has been registered on 23-7-96 in Bangarpet police station in Crime No. 164 under section 342 for Wrongful Confinement and for Murder under Section 302 IPC against Ponnappa Reddy, Police Sub Inspector, Law & Order; Rama Murthy, Police Sub Inspector (Crime), Bangarpet; C.P.C. Anjanappa No. 66, C.P.C. 72 Venkatapathy, C.P.C. 67 Narayanaswamy are of Bangarpet Police Station, for confining illegally in the police station and causing the death of Gopalappa, S/o Muniyappa, aged 30 years, R/o. Venugopalapura village, in the limits of Bangarpet Police Station. ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮಿಷನ್‌ನ ಮೇಜರ್ ರೆಕಮೆಂಡೇಷನ್ ಏನಿದೆ ಎಂದರೆ, ಇಂಥಾದ್ದು ಕಸ್ಟಡಿಯಲ್ಲಿ ಸಾವು ಆದ ತಕ್ಷಣ ಅವರಿಗೆ ತಿಳಿಸಬೇಕು, inquest and the post mortem should be videographed. In this incident, We have videographed the inquest and the post mortem. We have also

reported to the National Human Rights Commission. ಪೋಲೀಸರಿಗೆ ಕ್ಷಮೆ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಸರ್ಕಾರದಿಂದ ಸೀನಿಯರ್ ಪೋಲೀಸಿನವರಿಗೆ ಸ್ಟ್ರಿಕ್ಟ್ ಆಗಿ ವಾರ್ನಿಂಗ್ ಕೊಟ್ಟಿದ್ದೇವೆ. ಯಾರಾದರೂ ಕಂಪ್ಲೇಂಟ್ ಮಾಡುವುದಕ್ಕೆ ಬಂದರೆ, ಯಾವುದಾದರೂ ಕಂಪ್ಲೇಂಟ್ ಕೊಟ್ಟರು ಅದನ್ನು ತೆಗೆದುಕೊಂಡು ಬೇಲಿ ಎದ್ದು ಹೊಲ ಮೇಯ್ದಂತೆ ಅವರಿಗೆ ಈ ತರಹ ಮಾಡುವುದು ಸರಿಯಲ್ಲ. ಅದಕ್ಕೋಸ್ಕರ case under Sn.302 IPC has been registered against the police officers. ವಿಡಿಯೋ ಗ್ರಾಫ್ ಮಾಡಿದ್ದೇವೆ. ಜೊತೆಗೆ ವಾಟಾಳ್ ನಾಗರಾಜ್‌ರವರು ಹೇಳುವುದು ನಿಜ. ಅವರಿಗೆ ನಾವು ಪರಿಹಾರ ಕೊಡಬಹುದು. ನನಗೆ ಬಹಳ ದುಃಖವಾಗುತ್ತದೆ. That deceased Gopalappa has got two daughters. ಹೆಂಡತಿ ಮಕ್ಕಳು ಏನಾಗಬೇಕು? ನಾವು ಇಲ್ಲಿ ಚರ್ಚೆ ಮಾಡಿ ಒಂದು ಸ್ವಲ್ಪ ಪರಿಹಾರ ಕೊಡಬಹುದು. This matter has been referred to COD. All Custodial deths in the State of Karnataka, we refer to COD immediately. ಇದನ್ನು ತಕ್ಷಣ ಸಿ.ಓ.ಡಿಗೆ ರೆಫರ್ ಮಾಡುತ್ತೇವೆ. ಅವರಿಗೆ 25 ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಯವರು 25 ಸಾವಿರ ರೂಪಾಯಿ ಸ್ವಲ್ಪ ಕಡಿಮೆ ಯಾಗಬಹುದು, ಅವರಿಗೆ ಸ್ವಲ್ಪ ಜಾಸ್ತಿ ಪರಿಹಾರ ಕೊಡೋಣ ಎಂದು ತೀರ್ಮಾನ ಮಾಡಿದ್ದಾರೆ. ಏನಾದರೂ ಆಗಲಿ it is a shameful incident. But we have issued strict warning to the Officers. Come what may, we will not...

+ **ಶ್ರೀಬಿ. ಎಸ್. ಯಡಿಯೂರಪ್ಪ :–** ತಾವು ಸರಿಯಾದ ಕ್ರಮವನ್ನು ತೆಗೆದು ಕೊಂಡಿದ್ದೀರಿ ನಾನು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಇದಕ್ಕಿಂತ ಹೆಚ್ಚಾಗಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದರೆ ನನಗೆ ಗೊತ್ತಿದ್ದೂ ಸಹ ಪ್ರಶ್ನೆಯನ್ನು ಏಕೆ ಎತ್ತಿದೆ ಎಂದರೆ ಇವತ್ತು ಎಲ್ಲೋ ಒಂದು ನಡೆಯಿತು ಎಂದರೆ ಪರವಾಗಿಲ್ಲ. ಹೋದ ಬಾರಿ ಬಸವನ ಬಾಗೇವಾಡಿಯಲ್ಲಿ ಇದೇ ಕೆಲಸವಾಗಿದೆ. ನಂಜನ ಗೂಡು, ಹುಬ್ಬಳ್ಳಿ, ಇವತ್ತು ಇಲ್ಲಿ ಆಗಿದೆ. ಎರಡು ಸಂಗತಿ ನಾನು ಹೇಳುವುದೇನೆಂದರೆ ಒಂದು ಈ ತರಹ ತಾವು ಮನವರಿಕೆಯಾಗಿ ಅವರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಕೊಲೆ ಮೊಕದ್ದಮೆ ಹೂಡಿದಂತಹ ಅಧಿಕಾರಿಗಳನ್ನು ದಯಮಾಡಿ ಕಾನೂನು ಪ್ರಕಾರ ಪರಿಶೀಲನೆ ಮಾಡಿ ಅವರನ್ನು ಡಿಸ್‌ಮಿಸ್ ಮಾಡಿ. ಏಕೆಂದರೆ ಅವನು ಇಂಟರ್‌ಫಿಯರ್ ಆಗುವುದಕ್ಕೆ ಆಗುವುದಿಲ್ಲ. ಅದೇ ಇಲಾಖೆ, ಅದೇ ಖಾಕಿ ಬಟ್ಟೆ ಎಲ್ಲೋ ಒಂದು ಕಡೆ ಇನ್‌ಫ್ಲುಯೆನ್ಸ್ ಆಗಬಹುದು. ಇದುವರೆಗೆ ನಾನು ಇದನ್ನು ನಿಮಗೆ ಏಕೆ ಹೇಳುತ್ತೇನೆ ಎಂದರೆ ಹತ್ತಾರು ಉದಾಹರಣೆ ಕೊಡಬಲ್ಲೆ. ಮೊದಲು ಇದುವರೆಗೂ ಅವನು ಜೈಲಿಗೆ ಹೋದದು ಇಲ್ಲ. ಎರಡನೆಯದಾಗಿ ನಾನು ಸುತ್ತಿಬಳಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದು ಸುಪ್ರೀಂ ಕೋರ್ಟ್‌ನ ತೀರ್ಮಾನ ಇದೆ. ಅವರಿಗೆ ಅಡಿಕ್ವೇಟ್ ಕಾಂಪನ್ಸೇಷನ್ ಕೊಡಬೇಕು ಎಂದು ತಾವೇ ಹೇಳುತ್ತೀರಿ. ಈ ಲಾಕಪ್ ಡೆತ್ ಆದವರು ಕಡು ಬಡವರು. ಸಣ್ಣಪುಟ್ಟ ತಪ್ಪು ಮಾಡಿರಬಹುದು, ಮಾಡದೇ ಇರಬಹುದು. ನಂಜನಗೂಡು ತಾಲ್ಲೂಕಿಗೆ ಹೋಗಿ ಬನ್ನಿ ಗೊತ್ತಾಗುತ್ತದೆ ಹೆಣ್ಣುಮಗಳು ಬಸಿರಿ, ಮನೆಯಲ್ಲಿ ನೋಡುವವರು ಕೇಳುವವರು ಇಲ್ಲ; ಮೊದಲು ಎರಡು ಕೇಸ್‌ನಲ್ಲಿ ಸಂಬಂಧಪಟ್ಟವರನ್ನು ಡಿಸ್‌ಮಿಸ್ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳಿ. ಸುಪ್ರೀ ಕೋರ್ಟ್ ಇಷ್ಟೂ ಇರುವುದರಿಂದ

ಅಡಿಕ್ವೇಟ್ ಕಾಂಪನ್‌ಸೇಷನ್ ಕೊಡುವುದಕ್ಕೆ ಸರ್ಕಾರದಿಂದ ಪ್ರಯತ್ನ ಮಾಡಿ. ಮಾನ್ಯ ಸಿಂಧ್ಯಾರವರು ಗೃಹ ಸಚಿವರಾಗಿದ್ದಾಗ ನಾವು ಒಂದು ವಿಚಾರದಲ್ಲಿ ಡಿಮ್ಯಾಂಡ್ ಮಾಡಿದ್ದೆವು. ಹ್ಯೂಮನ್ ರೈಟ್ಸ್ ಕಮಿಷನ್ ಆಗಬೇಕು ಎಂದು ಹೇಳಿದ್ದೆವು. 15 ದಿವಸದಲ್ಲಿ ಮಾಡುತ್ತೇವೆ, ತಕ್ಷಣ ರೆಫರ್ ಮಾಡಬಹುದು ಎಂದಿದ್ದರು. ಆ ಕಡೆ ವಿಶೇಷವಾದಂತಹ ಗಮನವನ್ನು ತೆಗೆದುಕೊಳ್ಳಬೇಕು. ಒಂದು ಲಕ್ಷ ರೂಪಾಯಿ ಪರಿಹಾರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಲಾಕಪ್ ಡೆತ್ ಆದರೆ ಆ ಸ್ಟೇಷನ್ ರವರಿಗೆ ಜವಾಬ್ದಾರಿ ವಹಿಸಬೇಕು. ಈಗ ಏನಾಗಿದೆ ಎಂದರೆ ಯಾರು ಏನು ಬೇಕದರೂ ಮಾಡಬಹುದು ಎನ್ನುವಂತಹ ಪ್ರಶ್ನೆ ಬಂದಿದೆ. ನಂಜನಗೂಡಿನಲ್ಲಿ ನಡೆದಿರುವಂತಹ ಅವನ ಸಾವಿಗೆ ಕಾರಣವೇ ಇಲ್ಲ. ವಿನಾಕಾರಣ ಈ ರೀತಿಯಾಗಿದ್ದು ಅವನು ಆ ಸಂದರ್ಭದಲ್ಲಿ ಖೈದಿಯಾಗಿರಲಿಲ್ಲ. ಆಕಸ್ಮಾತ್ ಆಗಿ ಬಂದಂತಹವನು. ದಯಮಾಡಿ ತಾವು ಈಗ ಅವರಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಘೋಷಣೆ ಮಾಡಬೇಕು.

ಶ್ರೀ ಎಂ.ಪಿ. ಅಪ್ಪಚ್ಚು ರಾಜನ್ :- ಸೋಮವಾರ ಪೇಟೆಯಲ್ಲಿ ಲಾಕಪ್ ಡೆತ್ ಆದದ್ದಕ್ಕೆ ಪರಿಹಾರವನ್ನು ಇನ್ನೂ ಕೊಟ್ಟಿಲ್ಲ.

ಶ್ರೀ ಜೆ. ಹೆಚ್. ಪಟೇಲ್ :- ಆ ದೃಷ್ಟಿಯಿಂದ ಅದು ಪರಿಹಾರ ಅಲ್ಲ. ಲಾಕಪ್ ಡೆತ್ ಇಲ್ಲಿ ಅಧಿಕಾರಿಗಳು ಕ್ರಿಮಿನಲ್ಸ್ ಇರಬೇಕು, ಅವರು ಆ ಟೆಂಡೆನ್ಸಿಯಿಂದ ಬಂದಿರಬೇಕು. ಅವರುಗಳನ್ನು ಒಂದೇ ಬಾರಿಗೆ ತಿದ್ದುವುದಕ್ಕೆ ಆಗುತ್ತದೆ ಎಂದು ನಾನು ನಂಬಿಲ್ಲ. The whole system is so cruel. ಅದಕ್ಕೆ ಇವತ್ತು ನಂಜನಗೂಡಿನ ವಿಷಯವಿರಲಿ, ಇಲ್ಲಿ ನಾನು ಡಿಫೆಂಡ್ ಮಾಡಿಕೊಂಡು ಹೋಗುವುದಿಲ್ಲ. ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ಆಗಿದೆ ಎಂದು ವಿವಾದ ಇದೆ. ಅದಕ್ಕೆ ಹೋಲಿಸಿ ನಮ್ಮ ಸರ್ಕಾರದ್ದು ಕಡಿಮೆ ಎಂದು ನಾನು ಹೇಳುವುದಿಲ್ಲ. ಒಂದೂ ಕೂಡ ಆಗಬಾರದು, ಗೋಲಿಬಾರ್ ಆಗಬಾರದು, ಜನರನ್ನು ಕೊಲ್ಲಬಾರದು. ಯಾರೇ ಕೊಂದರೂ ತಪ್ಪು ಎನ್ನುವ ಒಂದು ಸಿದ್ಧಾಂತದಲ್ಲಿ ಹೋಗುತ್ತಿದ್ದೇವೆ. ಅದಕ್ಕೋಸ್ಕರ ಮಾನ್ಯ ಸಚಿವರು ಒಂದು ಪದ ಉಪಯೋಗಿಸಿದರು. ಅದು ಇದನ್ನು ಓದುವುದಕ್ಕೆ ನನಗೆ ನಾಚಿಕೆಯಾಗುತ್ತದೆ ಎಂದು. ಇದು ನಮ್ಮ ಸರ್ಕಾರ ಇದ್ದಾಗ ಹೀಗೆ ಆಯಿತಲ್ಲಾ ಎಂದು. That is enough. ಅಡಿಕ್ವೇಟ್ ಕಾಂಪನ್ಸೇಷನ್ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರನ್ನು ಅರೆಸ್ಟ್ ಮಾಡಬಹುದಾಗಿತ್ತಲ್ಲ! ಅವರು ಓಡಿಹೋಗಿದ್ದಾರೆ ಎಂದು ಹೇಳಿದ್ದಾರೆ. ಪೋಲೀಸರು ಓಡಿ ಹೋದಮೇಲೆ....

MR. SPEAKER :- We will close that. I appeal to you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಪೋಲಿಸರೇ ಹೋದರು ಎಂದರೆ ಹೇಗೆ ಗೊತ್ತಾಗಬೇಕು? ಒಂದು ವರ್ಷ ಆ ಕಡೆ ಈ ಕಡೆ ಆಂಧ್ರದಲ್ಲಿ, ಇಲ್ಲಿ ಉಳಿದುಕೊಂಡು ಬಂದ ಮೇಲೆ ಕೊನೆಗೆ ಏನಾಗುತ್ತದೆ ಎಂದರೆ ಡೈಲ್ಯೂಟ್ ಆಗಿರುತ್ತದೆ. ಅದರ ಇಂಪಾರ್ಟೆನ್ಸ್ ಹೋಗಿಬಿಡುತ್ತದೆ.

ಅಧ್ಯಕ್ಷರು :- ಈ ಶೂನ್ಯವೇಳೆ ಪ್ರಸ್ತಾಪ ಎಂದರೆ ನನಗೆ ಬೇಸರ ಬರುತ್ತಿದೆ. The immediate effect of registering case under Section 302 IPC is, they will have to be arrested.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ನಾನು ಇಂಟರ್ ಫಿಯರ್ ಮಾಡಲಿಲ್ಲ, ಇಲ್ಲಿಯವರೆಗೂ ಮಾತನಾಡದೇ ಸುಮ್ಮನೆ ಕುಳಿತಿದ್ದೆ. ಈ ಅಂಶ ಏಕೆ ಹೇಳಿದೆ ಎಂದರೆ ತಕ್ಷಣ ಅರೆಸ್ಟ್ ಮಾಡಬೇಕು. ನೀವು ಅರೆಸ್ಟ್ ಮಾಡದೇ ಹೋದರೆ ಏನು ಉಪಯೋಗ? ಓಡಿಹೋಗಿ ಪರಾರಿಯಾಗಿದ್ದರೆ ಎಂದು ಸುಮ್ಮನೆ ಕುಳಿತರೆ ಒಂದು ಕಡೆ ಕಣ್ಣೀರು ಸುರಿಸಿ ಇನ್ನೊಂದು ಕಡೆ ಅರೆಸ್ಟ್ ಮಾಡಲಿಲ್ಲ ಅವರನ್ನು ಎಂದರೆ ರಾಂಗ್ ಮೆಸೇಜ್ ಹೋಗುತ್ತದೆ. This is a lapse on the part of the district administration.

MR. SPEAKER :- ಮಾನ್ಯ ಖರ್ಗೆಯವರು ಹೇಳುವುದರಲ್ಲಿ ಅರ್ಥವಿದೆ. ಅವರ ಮಾತಿನ ಹಿಂದಿನ ಅರ್ಥವೇನೆಂದರೆ, the accused in this case are the the police personnel. The other colleagues in the Department will naturally have a kind of lenient attitude towards these people. Kindly speed up the process of securing these people.

ಶ್ರೀ ಜೆ. ಹೆಚ್. ಪಟೇಲ್ :- ಪ್ರಿಸಿಡೆಂಟ್ ಇದ್ದರೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆ.

SRI ROSHA BAIG :- I assure you Sir, that they will be arrested immdiately.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅವನ ಮನೆಯವರು ಬದುಕುವುದು ಹೇಗೆ? ಮಾಡಿ ಸ್ವಾಮಿ, ಏನೇನೋ ಮಾಡುತ್ತೀರಿ. ನಿಮ್ಮ ಕಾಲದಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಲಾಕಪ್ ಡೆತ್ ಆದರೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಬೇಕು. ಇಲ್ಲದಿದ್ದರೆ ಅವರು ಹೇಗೆ ಜೀವನ ನಡೆಸುವುದು? ಅವನ ಮನೆ ಸರ್ವನಾಶವಾಗಿದೆ. ಹೇಳುವವರು ಕೇಳುವವರು ಯಾರೂ ಇಲ್ಲ. 25 ಸಾವಿರ ರೂಪಾಯಿಗಳಿಂದ ಏನು ಮಾಡಬೇಕು? ಅವರು ಬದುಕುವುದು ಹೇಗೆ? ಒಂದು ಲಕ್ಷ ರೂಪಾಯಿಗಳನ್ನು ನಾವು ಸಂಗ್ರಹ ಮಾಡಿಕೊಡುತ್ತೇವೆ, ಆ ವ್ಯಕ್ತಿಯನ್ನು ವಾಪಸ್ಸು ಕೊಡಿ. ಆಗುತ್ತದೆಯೇ? ಅದು. ನೀವೇ ಹೇಳಿದಿರಿ ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ ಎಂದು. ಸುಪ್ರೀಂ ಕೋರ್ಟ್ ಡಿಸಿಷನ್ ಪ್ರಕಾರ ಅಡಿಕ್ವೇಟ್ ಕಾಂಪನ್ಸೇಷನ್ ಕೊಡಬೇಕು. ನಾವು ಏನೋ ತಮ್ಮ ಮುಂದೆ ಭಿಕ್ಷೆ ಕೇಳುವಂತಹ ಪರಿಸ್ಥಿತಿ ಇಲ್ಲ. ನಿಮ್ಮ ಕಾಲದಲ್ಲಿ ಇದು ಆಗುವುದು ಬೇಡ. ಅವನು ಕಡು ಬಡವ ಇದ್ದಾನೆ.

ಶ್ರೀ ವಾಟಾಳ್ ನಾಗರಾಜ್ :- ಒಂದು ಲಕ್ಷ ರೂಪಾಯಿ ಜಾಸ್ತಿ ಏನಲ್ಲ. ಅವನು ಬೀದಿಯಲ್ಲಿ ವ್ಯಾಪಾರ ಮಾಡತಕ್ಕಂಥವನು. ಒಂದು ಲಕ್ಷ ರೂಪಾಯಿ ಜಾಸ್ತಿ ಏನಲ್ಲ. ಒಂದು ಲಕ್ಷರೂಪಾಯಿ ಕೊಟ್ಟ ತಕ್ಷಣ ಅವನ ಶರೀರ ಬರುತ್ತದೆ ಎಂದು ಯಾರೂ ಹೇಳುವುದಿಲ್ಲ.

ಶ್ರೀ ಜೆ. ಹೆಚ್. ಪಟೀಲ್ :- ನಾನು ಹೇಳಿದ್ದುದು ಪ್ರಿಸಿಡೆಂಟ್, ಆಗಬಾರದು. ಹಿಂದೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದರೆ ನಾವು ಕೊಡುತ್ತೇವೆ. ಲಾಕಪ್ ಡೆತ್ ಕೇಸನಲ್ಲಿ ಎಷ್ಟು ಹಣ ಕೊಡಬೇಕು ಎನ್ನುವುದನ್ನು ಜನರಲ್ ಆಗಿ ನಾವು ಫಿಕ್ಸ್ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಫಿಕ್ಸ್ ಮಾಡಬೇಡಿ. ನಿಮ್ಮ ಕಾಲದಲ್ಲಿ ಲಾಕಪ್ ಡೆತ್ ಆಗದ ಹಾಗೆ ನೋಡುತ್ತೇವೆ ಎಂದು ಹೇಳಿ. ಲಾಕಪ್ ಡೆತ್ ಮಾಡಿಸುತ್ತೇನೆ, ಪರಿಹಾರ ಕೊಡುತ್ತೇವೆ ಎಂದರೆ ಹೇಗೆ?

ಶ್ರೀ ಜೆ. ಹೆಚ್. ಪಟೀಲ್ :- ನಾನು ಅದನ್ನೇ ಹೇಳಿದ್ದುದು. ಕಾಂಪನ್ಸೇಷನ್ ಜಾಸ್ತಿ ಕೊಡುತ್ತೇವೆ ಎಂದು ಜನ ಅಲ್ಲಿ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಆಗಬಾರದು. ಆದರೆ ಈ ಕೇಸ್‌ನಲ್ಲಿ ಏನು ಹೇಳಿದ್ದೀರಿ, ಆಡಿಕ್ವೇಟ್ ಕಾಂಪನ್ಸೇಷನ್ ಎಂದು ಆ ರೀತಿಯಾಗಿ 50 ಸಾವಿರ 25 ಸಾವಿರಗಿಂತ ಜಾಸ್ತಿ ಕೊಡಬೇಕು ಎಂದು ಏನು ಸೂಚಿಸಿದ್ದೀರಿ ಅದಕ್ಕೆ ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದು ನಿಂತಿದ್ದೆ. ಲಾಕಪ್ ಡೆತ್ ಮೇಲೆ ವಿಷಯ ಪ್ರಸ್ತಾಪವಾದಮೇಲೆ.....

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾಣಯ್ಯನವರ ಜಾಗ ಬದಲಾಯಿಸಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಏನೋ ಉತ್ಸಾಹದಲ್ಲಿ ಹೇಳುವುದಕ್ಕೆ ಹೊರಟಾಗ ತಕ್ಷಣ ಅವರು ಮಧ್ಯ ಬಂದು ಬಾಯಿ ಹಾಕುತ್ತಾರೆ. ದೇವರ ದಯೆಯಿಂದ ಮಾನ್ಯ ನಾಗೇಗೌಡರು ದೂರ ಕುಳಿತುಕೊಂಡಿದ್ದಾರೆ. ಅದರಿಂದ ನಾವು ಸೇಫ್ ಆಗಿದ್ದೇವೆ. ನಾಣಯ್ಯನವರು ಮುಖ್ಯಮಂತ್ರಿ ಹಿಂದೆ ಕುಳಿತುಕೊಂಡಿರುವುದರಿಂದ ನಮಗೆ ಏನೂ ನ್ಯಾಯ ಸಿಗುವುದಿಲ್ಲ. ಸತ್ತವರಿಗೂ ನ್ಯಾಯ ಸಿಗುವುದಿಲ್ಲ. ನಿನ್ನೆ ನಿಮ್ಮ ಕೊಠಡಿಯಲ್ಲೇ ನಮಗೆ ಏನು ಅನುಭವ ಆಯಿತು ಎಂಬುದನ್ನು ತಾವು ನೋಡಿದ್ದೀರಿ ಎಂದು ಅಂದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ತಾವು ನಾಣಯ್ಯನವರಿಗೆ ಸಂಸದೀಯ ವ್ಯವಹಾರಗಳ ಸಚಿವರ ಸ್ಥಾನಕ್ಕೆ ರಾಜೀನಾಮೆ ಕೊಡಿಸಿಬಿಡಿ ; ಗೃಹ ಮಂತ್ರಿಗಳನ್ನಾಗಿ ಯಾದರೂ ಮಾಡಿಬಿಡಿ.

ಶ್ರೀ ಎಂ. ಸಿ. ನಾಣಯ್ಯ :- ಮಾನ್ಯ ಸಭಾಧ್ಯಕ್ಷರೇ, ನಾನು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತಿದ್ದುದ್ದೇ ಬೇರೆ, ಅವರು ಯಾವುದರ ಬಗ್ಗೆ ಹೇಳುತ್ತಾರೋ ನನಗೆ ಗೊತ್ತಿಲ್ಲ. ಅಲ್ಲ 25 ಸಾವಿರ, 50 ಸಾವಿರ, 1 ಲಕ್ಷ ಬಹುಶಃ ನಾಳೆ ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಆದಮೇಲೆ ಆ ಆ ಲಾಕಪ್ ಡೆತ್‌ನಲ್ಲಿ ಇರತಕ್ಕಂತ ಎಲ್ಲಾ ಕೇಸುಗಳು ಅದನ್ನು ಅನ್ವಯಿಸಬೇಕಾಗುತ್ತದೆ. ಬಹುಶ : ಅದೆಲ್ಲಾದರೂ ಅವರ ಮನಸ್ಸಿನಲ್ಲಿ ಇರಬಹುದು, ಒಂದು ತೀರ್ಮಾನವನ್ನು ತೆಗೆದುಕೊಂಡು ಆದಮೇಲೆ ಆ ತೀರ್ಮಾನ ಆಗಲೇಬೇಕು. ಇವೊತ್ತು 50 ಸಾವಿರ 1 ಲಕ್ಷ ಅಂದರೆ, 1 ಲಕ್ಷ ರೂಪಾಯಿ ಲಾಕಪ್ ಡೆತ್ ಈ ಬಗ್ಗೆ ಇವೊತ್ತು ತೀರ್ಮಾನ ಆಗಬೇಕಲ್ಲಾ ಅದು ಎಲ್ಲಿಯಾದರೂ ಅವರ ಮನಸ್ಸಿನಲ್ಲಿ ಇರಬೇಕು. ಆದರೆ ನಾನು ಹೇಳಿರತಕ್ಕಂಥದ್ದು ಬೇರೆ ವಿಚಾರ ಇದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲ.